International Journal of Kannada Research
www.kannadajournal.com

ISSN: 2454–5813
IJKR 2018; 4(1): 23-25
© 2018 IJKR
www.kannadajournal.com
Received: 07-11-2017
Accepted: 08-12-2017

**ಸಂಜಯಕುಮಾರ ಶಿ ಹಾರೋಬಿಡಿ**
ಸಂಶೋಧನಾ ವಿದ್ಯಾರ್ಥಿ
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ಬೆಳಗಾವಿ

**Correspondence**
**ಸಂಜಯಕುಮಾರ ಶಿ ಹಾರೋಬಿಡಿ**
ಸಂಶೋಧನಾ ವಿದ್ಯಾರ್ಥಿ
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ಬೆಳಗಾವಿ

# ಬೇಂದ್ರೆಯವರ ಕಾವ್ಯ ‘ಜೋಗಿ’ ಮತ್ತು ಆಧುನಿಕತೆ

**ಸಂಜಯಕುಮಾರ ಶಿ ಹಾರೋಬಿಡಿ**

ಮಲೆನಾಡಿನ ಸೆರಗಿನಲ್ಲಿ ಬಾಳಿ ಬದುಕಿ ಸಾಹಿತ್ಯ ಲೋಕದಲ್ಲಿ ಅಜರಾಮರವಾಗಿ ಬೆಳೆದು ನಿಂತವರು ದ.ರಾ.ಬೇಂದ್ರೆ. ನವೋದಯ ಕಾಲದ ಸಂದರ್ಭದಲ್ಲಿ ಕಾವ್ಯದ ಸೋಗಸುಗಾರಿಕೆಯಿಂದ ಸಹೃದಯರ ಮನಸ್ಸನ್ನು ಸೆಳೆದಿರುವಂತವರು. ಕಾವ್ಯ ಓದುಗರ ಮನ ಮುಟ್ಟುವಂತೆ ರಚನೆ ಮಾಡಿದವರು. ಮನಸ್ಸಿನ ಒಳ ತುಡಿತಗಳನ್ನು, ಬದುಕಿನ ಎಲ್ಲ ಮಗ್ಗಲುಗಳ ದರ್ಶನವನ್ನು ಶಬ್ಧಗಳ ಮೂಲಕ ಹಿಡಿದು ರಸ ಸ್ವಾಧವನ್ನು ಓದುಗರಿಗೆ ನೀಡಿದ ಕವಿ ಮಾಂತ್ರಿಕ. ಮುಗ್ಧ ಮನಸ್ಸುಗಳ ಹೊಯ್ದಾಟಗಳನ್ನು, ಆಸೆ, ಆಕಾಂಕ್ಷೆಗಳನ್ನು ಕಾವ್ಯದ ಚೌಕಟ್ಟಿನಲ್ಲಿ ಹಿಡಿದಿಟ್ಟ ಶಬ್ಧ ಗಾರುಡಿಗ. ‘ಎನ್ನ ಪಾಡು ಎನಗಿರಲಿ ಹಾಡನ್ನಷ್ಟೆ ನೀಡುವೆ ರಸಿಕ’[೧] ಈ ಬಗೆಯ ಬೇಂದ್ರೆಯವರ ಕವಿತೆಗಳು ಸದಾ ಕಾಲವೂ ನೂತನವಾದವುಗಳು.

ಇಂತಹ ಕವಿಯ ಕಾವ್ಯದ ಪ್ರತಿ ಸಲದ ಓದು ಹೊಸ ಹೊಸ ಚಿಂತನೆಗಳಿಗೆ ಒಳಪಡಿಸುತ್ತವೆ. ನಿಗೂಡಾರ್ಥಗಳಿಂದ ಕೂಡಿದ ಶಬ್ಧಗಳು ವಾಸ್ತವ ಮತ್ತು ತಾರ್ಕಿಕ ಸತ್ಯಗಳ ನಡುವಿನ ಹುಡುಕಾಟವನ್ನು ನಡೆಸುತ್ತಿರುತ್ತವೆ. “ಬೇಂದ್ರೆ ಕವಿತೆಗಳನ್ನು ಓದುವಾಗ ಅದು ವಾಸ್ತವ ಅನುಭವ ಹೌದು, ಆದರೆ ಅಲ್ಲ. ಅದಕ್ಕಿಂತ ಬೇರೆಯೋ ಮುಗಿಲೋ ಆದದ್ದು ಅನಿಸುತ್ತದೆ. ಅರ್ಥವಿದ್ದರೂ ಅರ್ಥವೇ ಎಲ್ಲವೂ ಅಲ್ಲ, ಅರ್ಥದ ಸೀಮೆಯನ್ನು ದಾಟಿ ನಮಗೆ ಆದದ್ದನ್ನು ಬೇರೆ ಮಾತುಗಳಲ್ಲಿ ಹೇಳಲು ಸಾಧ್ಯವೇ ಇಲ್ಲ ಅನಿಸುವ ಹಾಗೆ ಅನಿಸುತ್ತದೆ”[೨] ಎಂದು ಓ.ಎಲ್.ನಾಗಭೂಷಣಸ್ವಾಮಿ ಅಭಿಪ್ರಾಯ ಪಡುತ್ತಾರೆ.

ಬಾಹ್ಯವಾದ ನೋಟಕ್ಕಿಂತ ಆಂತರ್ಗಿಕವಾದ ಒಳನೋಟ ಇವರ ಕವಿತೆಗಳನ್ನು ಓದುಗನಿಗೆ ಇರಬೇಕಾಗುತ್ತದೆ. ಅದು ಕೇವಲ ಕಣ್ಣಿಗೆ ಕಾಣದ ಸತ್ಯವಾಗಿರದೆ ಅದನ್ನೂ ಮೀರಿದ ಅನುಭವವನ್ನು ಹೇಳುವಂತಿರುತ್ತದೆ. ಪದಗಳಿಗೆ ಅರ್ಥವನ್ನು ಕಲ್ಪಿಸಿ ಭಾವವನ್ನು ಅರ್ಥೈಸಿಕೋಳ್ಳುವ ರೀತಿಯದ್ದಲ್ಲ. ಹೀಗಾಗಿ ಅನೇಕ ಕವಿತೆಗಳು ಅವರ ವಿದ್ವತ್ತಿನ ರೂಪಕವೇನು ಎಂಬಂತೆ ಅನಿಸುತ್ತದೆ. ಕವಿತೆಗಳ ಸೊಗಸು, ಸ್ವಚ್ಛಂದವಾದ ಛಂದಸ್ಸು, ಪ್ರಾಸ ಬದ್ಧವಾದ ಪದಗಳು ಆಕರ್ಷಣೀಯವಾಗಿವೆ.

ನವೋದಯ ಕಾಲದಲ್ಲಿ ಭಾವಗೀತೆಗಳನ್ನು ಪರಿಣಾಮಕಾರಿಯಾಗಿ ಬರೆದ ಅನೇಕರಲ್ಲಿ ಬೇಂದ್ರೆ ಪ್ರಮೂಖರಾಗಿದ್ದಾರೆ. ಅನೇಕ ವೈವಿಧ್ಯತೆಗಳಿಂದ ಕೂಡಿದ ಕಾವ್ಯಗಳನ್ನು ರಚಿಸಿ ಚಿರಪರಿಚಿತರಾದರು. ಮಲೆನಾಡಿನ ಅಂಚಿನಲ್ಲಿರುವ ಧಾರವಾಡದ ಹೆಸರು ಕೇಳಿದ ತಕ್ಷಣ ಸಾಹಿತಿಗಳು, ಸಹೃದಯರಿಗೆ ನೆನಪಾಗುವುದು ಸಾಧನಕೇರಿ. ಈ ಹೆಸರು ಔಚಿತ್ಯ ಪೂರ್ಣವಾಗಿದೆ. ಈ ಕೆರೆಯ ದಂಡೆಯ ಪಕ್ಕದಲ್ಲಿ ಬೇಂದ್ರೆ ಅವರು ಬಾಳಿ ಬದುಕಿದ್ದು. ಈ ಕೆರೆಗು ಬೇಂದ್ರೆಯವರಿಗೂ ಒಂದು ರೀತಿಯ ಭಾವನಾತ್ಮಕ ಸಂಭಂದವಿದೆ. ಅವರು ರಚಿಸಿದ ಅನೇಕ ಕವಿತೆಗಳಿಗೆ ಸ್ಪೂರ್ತಿ ನೀಡಿದ ಶೆಲೆ ಅದು.

೧) ಅಂಬಿಕಾತನಯದತ್ತ ಸಮಗ್ರ ಕಾವ್ಯ, ಸಂಪುಟ ೨, ವಾಮನ ಬೇಂದ್ರೆ, ಪುಟ, ೨೭.
೨) ಮತ್ತೆ ಮತ್ತೆ ಬೇಂದ್ರೆ, ಕಿ ರಂ ನಾಗರಾಜ, ೨೦೧೨, ಪುಟ, ೭.

ಈ ಬಗೆಯ ಪ್ರಕೃತಿಯೊಂದಿಗಿನ ಒಡನಾಟವು ಪ್ರತಿಬಿಂಬಿತವಾಗಿರುವ ಬಗೆಯನ್ನು ‘ಜೋಗಿ’ ಕವಿತೆಯಲ್ಲಿ ಅಧ್ಯಯನಿಸಬಹುದು. ಸಾಧನಕೇರಿಯ ಸುತ್ತಲಿನ ಪ್ರಕೃತಿಯ ಮೇಲೆ ಈ ಕವಿತೆ ರಚನೆಯಾಗಿದೆ. ಅಂದು ತಾವು ಕಂಡ ಚಿತ್ರಣ ಓದುಗನನ್ನು ತಮ್ಮ ಕಾಲಕ್ಕೆ ಕೊಂಡೊಯ್ಯುತ್ತದೆ. ಈ ಬಗೆಯ ಸೆಳೆತ ಅವರ ಎಲ್ಲ ಕವಿತೆಗಳಲ್ಲಿ ಕಾಣಬಹುದು. ಆದರೆ ಇವತ್ತಿನ ಸಂದರ್ಭದಲ್ಲಿ ಉಂಟಾದ ಬದಲಾವಣೆಗಳು ಆತಂಕವನ್ನುಂಟು ಮಾಡುತ್ತವೆ.

ಬೇಂದ್ರೆ ಅವರು ಬಹು ಭಾಷಾ ಪಂಡಿತರಾಗಿದ್ದವರು. ಇಂಗ್ಲಿಷ್ ಸಾಹಿತ್ಯದ ದಟ್ಟ ಪ್ರಭಾವ ಇದ್ದ ಕಾಲದಲ್ಲಿ ದೇಸಿಯತೆಯ ಸೊಗಡನ್ನು, ಪ್ರಾದೇಶಿಕ ಭಾಷೆಯ ಮಹತ್ವವನ್ನು ಸಾರುವ ಕವಿತೆಗಳನ್ನು ಹೆಚ್ಚಾಗಿ ರಚನೆ ಮಾಡಿದ್ದಾರೆ. "ರೀತಿರಾತ್ಮ ಕಾವ್ಯಸ್ಯ" ಎಂಬುದನ್ನು ಬೇಂದ್ರೆ ಅವರು ಧಾರವಾಡದ ಆಡು ಭಾಷೆಯ 'ದೇಸಿಯತೆ'ಯಲ್ಲಿ ಸಾಧಿಸಿ ತೋರಿದ್ದಾರೆ[೩]. ಆಂಗ್ಲ ಸಾಹಿತ್ಯದ ಪ್ರಭಾವಕ್ಕೆ ಒಳಗಾಗದೆ ಸಾವಿರಾರು ಕವಿತೆಗಳನ್ನು ಬರೆದರು. ಪ್ರಾದೇಶಿಕತೆಯ ಮಹತ್ವವನ್ನು ಸಾರುವಂತಿರುವ ಕವಿತೆ 'ಜೋಗಿ' ವಾಚಕರನ್ನು ಹೆಚ್ಚು ಆಕರ್ಷಿಸುತ್ತದೆ.

"ಜನಪದ ಆವರಣವನ್ನು ಸೃಷ್ಟಿಸಿಕೊಳ್ಳುವುದಕ್ಕೆ ಅಲ್ಲಿ ಜನಪದ ಲಾಸ್ಯ ಬಳುಕು ಸಹಕಾರಿಯಾಗಿದೆ. ಆ ಭಾಷೆ ಇರುವುದರಿಂದ ಪ್ರತಿಮೆಗಳು ಒಂದು ಜನಪದ ಪರಿವೇಷ ಪಡೆಯುವುದು ಸಹಜವೆಂಬಂತಾಗುತ್ತದೆ. ಜೊತೆಗೆ ಕವನದುದ್ದಕ್ಕೂ ತನ್ನತನವನ್ನು ಅಗತ್ಯ ಎಚ್ಚರದಿಂದ ಹಿಡಿದಿಟ್ಟುಕೊಳ್ಳುತ್ತ ಹರಿಯುವ ಶಿಷ್ಟ ಭಾಷೆ. ಶಿಷ್ಟ ಪ್ರಜ್ಞೆಯ ಸಂವೇದನಾ ಸ್ಥರಗಳನ್ನು ಕಾಪಾಡಿಕೊಳ್ಳುತ್ತ ಹೋಗುತ್ತದೆ"[೪] ಎಂಬುದು ಜಿ.ಹೆಚ್.ನಾಯಕರ ಅಭಿಪ್ರಾಯವಾಗಿದೆ. 'ಜೋಗಿ' ಕಾವ್ಯದ ಕವಿತೆಯಲ್ಲಿ ಈ ಅಂಶವನ್ನು ಹೆಚ್ಚು ಗಮನಿಸಬಹುದು.

> "ಊರ ತುದಿಯ ಮೂರು ಬಟ್ಟೆ ಮೂಗಿದಲ್ಲಿ ಕೊಳ್ಳವೆಲ್ಲಿ
> ಹಳ್ಳ ಅಡಗಿ ಹರಿದಲ್ಲಿ ತುಡುಗು ದನ ತೊಂಡು ಮೇಯುವಲ್ಲಿ
> ದಿಕ್ಕು ತಪ್ಪತಾರ ತಪ್ಪಿ ಹೊಕ್ಕರ ಕಕ್ಕಾವಿಕ್ಕಿಯಾಗಿ
> ಇರುಳ ಅಂತನ ಹಗಲ ಗೂಕತಾವ ಅಲ್ಲಿ ಜೋಡ ಹಕ್ಕಿ" (ಜೋಗಿ)

ಸಾದನಕೇರಿ ಅಂದು ಧಾರವಾಡದ ಅಂಚಿಗೆ ಇರುವ ಪ್ರದೇಶ. ಬಯಲು ಸೀಮೆ ಕಡೆಗೆ ಹೋಗುವವರಿಗೆ ಮಲೆನಾಡಿನ ಅಂಚು. ಮಲೆನಾಡಿಗೆ ಹೋಗುವ ಜನರಿಗೆ ಅದು ಪ್ರವೇಶ ಎನ್ನುವಂತಿದೆ. ಇವತ್ತಿಗೂ ಕೂಡಾ ಸಾಧನಕೇರಿ ಸೇರಲು ಮೂರು ಕವಲು ದಾರಿಗಳು ಇವೆ. ಆ ರಸ್ತೆಯ ಮೂಲಕ ನಗರವನ್ನು ಪ್ರವೇಶ ಪಡೆಯಬಹುದು. ಈ ಕವಿತೆಯಲ್ಲಿ ಧಾರವಾಡದ ಸುತ್ತಲಿನ ಪರಿಸರವನ್ನು ಅತ್ಯಂತ ಮನೋಜ್ಞವಾಗಿ ಚಿತ್ರಿಸಿದ್ದಾರೆ. ಈ ಕವಿತೆಯನ್ನು ಸಮಕಾಲಿನ ಸಂದರ್ಭದಲ್ಲಿ ಅಧ್ಯಯನಕ್ಕೆ ಒಳಪಡಿಸಿದಾಗ ನಮಗಿಂದು ಸಾಧನಕೇರೆಗೆ ಹೋದರೆ ದಿಕ್ಕು ತಪ್ಪುತ್ತದೆ. ಅಲ್ಲಿನ ಪ್ರಕೃತಿಯ ಸೌಂದರ್ಯದ ದಯನೀಯ ಸ್ಥಿತಿಯನ್ನು ಕಂಡು. ಮೊಹದ ಬಲೆಗೆ ಸಿಲುಕಿದ ಮನಸ್ಸುಗಳು ತಮಗೆ ಬೇಕಾದಂತೆ ಕಟ್ಟಿಕೊಂಡ ನಗರದ ಸೋಬಗು. ಕವಿ ಕಂಡ ಸಹಜದ ಚಿತ್ರಣ ನಾವಿಂದು ಕಾಣುವ ಆಧುನಿಕತೆಯೊಂದಿಗೆ ಮರು ಹುಟ್ಟು ಪಡೆದ ಸೌಂದರ್ಯ. ಅಲ್ಲಿನ ಸುಮಾರು ದೂರದ ಕಾಡಿನ ವರ್ಣನೆಯನ್ನು 'ಬಾರೋ ಸಾಧನಕೇರಿಗೆ' ಕವಿತೆಯಲ್ಲಿ ಕಾಣಬಹುದು

೩) ಅಂಬಿಕಾತನಯದತ್ತ ಸಮಗ್ರ ಕಾವ್ಯ, ಸಂಪುಟ ೨, ವಾಮನ ಬೇಂದ್ರೆ ಪುಟ, ೨೨

೪) ಸಮಕಾಲಿನ ಸಾಹಿತ್ಯ ವಿಮರ್ಷೆ, ಜಿ ಹೆಚ್ ನಾಯಕ್, ಪುಟ, ೨೧

> "ಅಲ್ಲಿ ತೊಗಲ ಬಾವಲಿ ಚಿರತಾವ ಭರತಿ ಹಗಲಿನೊಳಗ
> ಹಿಂಡ ಪಾರಿವಾಳ ಹೊಕ್ಕು ಹೊರಡತಾವ ಮತ್ತ ಒಳಗ ಹೋರಗ
> ಅಲ್ಲಿ ಹಬ್ಬಿ ಹರುಹದೇ ಬೇವಿಗೆ ಸುತ್ತ ಅಮೃತ ಬಳ್ಳಿ
> ಹಾಲ ಸುರಸತಾವ ಆಲ ಅಲ್ಲಿ ಅಲ್ಲಾಡತಾವ ಅಳ್ಳಿ"

ಎನ್ನುವಂತೆ ವರ್ಣಿಸುತ್ತಾರೆ. ದಟ್ಟವಾದ ಕಾಡಿನ ಚಿತ್ರಣ ಓದುಗರ ಮುಂದೆ ನಿಲ್ಲುತ್ತದೆ. ಇಂದು ಈ ವಾಸ್ತವ ನಮ್ಮಿಂದ ದೂರವಾಗಿದೆ. ಅಂತಹ ಪ್ರಕೃತಿ ಸೌಂದರ್ಯವೇ ಅಪರೂಪವಾಗಿದೆ. ಸಾಧನಕೇರಿ ಎಂದ ಕೂಡಲೆ ನೆಮ್ಮದಿ. ಕಾರಣ ನಾಡಿನ ಹೆಸರಾಂತ ಕವಿ ಬಾಳಿ ಬದುಕಿದ ಸ್ಥಳ. ಬದಲಾದ ಪ್ರಸ್ತುತ ಚಿತ್ರಣ ನೋಡುಗನಿಗೆ ಶೋಕವನ್ನುಂಟು ಮಾಡುತ್ತದೆ. ಬೇಂದ್ರ ಅವರು ಕಂಡ ಸಹಜ ಪ್ರಕೃತಿ ಇಂದು ಮಾಯವಾಗಿದೆ. ಗಿಡ ಗಂಟೆಗಳು ಇದ್ದ ಜಾಗದಲ್ಲಿ ಸಿಮೆಂಟನ ಮನೆಗಳು ರಾರಾಜಿಸುತ್ತಿವೆ. ತೊಗಲ ಬಾವಲಿಗಳ ಸ್ಥಾನದಲ್ಲಿ ಹೂವಿನ ಕುಂಡಗಳು ನೇತಾಡುತ್ತಿವೆ. ವಿಶಾಲವಾದ ಕಾಡಿನ ಅಂಚನ್ನು ನಾಶ ಮಾಡಿ ಮನೆಯ ಕಂಪೌಂಡಿನ ಒಳಗೆ ಕೃತಕ ಕಾಡನ್ನು ಸೃಷ್ಟಿಸಿಕೊಂಡಿದ್ದಾರೆ. ಒಬ್ಬ ಸೃಜನಶೀಲ ಬರಹಗಾರನಲ್ಲಿ ಹುಟ್ಟುವ ಭಾವನೆಗಳು ಆಧುನಿಕರಿಗೆ ವಿಭಿನ್ನವಾಗಿ ಕಾಣುವುದು ಸಹಜ. ನಗರೀಕರಣಗೊಳ್ಳುತ್ತಿದೆ. ಅಭಿವೃದ್ಧಿಯ ಹೆಸರಿನಲ್ಲಿ ವಿಸ್ತಾರ ಹೆಚ್ಚುತ್ತ ಸಾಗುತ್ತಿದೆ. ಪ್ರಕೃತಿಯನ್ನು ಉಳಿಸುವ ಮನಸ್ಸುಗಳು ಮಾಯವಾಗುತ್ತಿವೆ. ಇದು ನಾವು ಅಭಿವೃದ್ಧಿ ಮಾಡಲು ಹೊರಟಿರುವ ವಾಸ್ತವ.

ಧಾರವಾಡ ಸೀಮೆಯ ಮಾವು ದೇಶದ ತುಂಬ ಪ್ರಸಿದ್ಧಿಯಾಗಿದೆ. ಈ ಹಣ್ಣನ್ನು ಕುರಿತು ಬೇಂದ್ರೆ ಅವರ

> "ಆ ಮಾವಿನೊಳಗ ಈ ಸುಗ್ಗಿಯೊಳಗ ಬಂದದ ಕೋಗಿಲೊಂದು
> ತನ್ನ ಜೋಡಿ ಕರೆದ್ಹಾಂಗ ಕರಿತದ ನನ್ನ ಬಾರ ಅಂದು
> ಕೂಗೇ ಕೂಗತದ ಕೂಗೇ ಕೂಗತದ ಗಿರಣಿ ಕರೆಯೊ ಹಾಂಗ
> ತೆರಸು ಇಲ್ಲ ಒಂದ ಅಳತಿ ಕೂಗತದ ಬ್ಯಾಸರಿಲ್ಲದಾಂಗ"

ಕವಿತೆ ನಿಜಕ್ಕೂ ಇಂದು ಕಳವಳವನ್ನುಂಟು ಮಾಡುತ್ತದೆ. ಅಭಿವೃದ್ಧಿಯ ಹೆಸರಿನಲ್ಲಿ ಅಲ್ಲಿಯ ಸೌಂದರ್ಯ ಇಂದು ಇಲ್ಲದಂತಾಗಿದೆ. ಕೋಗಿಲೆಗಳು ಕೂಗುತ್ತಿದ್ದ ಸ್ಥಳದಲ್ಲಿ ಇಂದು ಧಾರ್ಮಿಕ ಸಂಸ್ಥೆಗಳು ಗೋಚರವಾಗಿವೆ. ಕೋಗಿಲೆಯ ಧ್ವನಿಗೆ ಪರ್ಯಾಯ ಎಂಬಂತೆ ಈ ಸಂಸ್ಥೆಗಳ ಧ್ವನಿ ಕೂಗುತ್ತಿವೆ. ವಾಹನಗಳ ಹಾರ್ನ ಶಬ್ಧ ಇಡಿ ಕೆರೆಯ ಶಾಂತತೆಗೆ ಬಂಗ ತಂದಿವೆ. ಕವಿಯ ಮನಸ್ಸು ಅರಳಿದ ಈ ಜಾಗದಲ್ಲಿ ಸದ್ಯ ಅವಲೋಕನ ಮಾಡಿದರೆ ಸಾಹಿತಿಯ ಮನಸ್ಸು ಕಸಿವಿಸಿಗೊಳ್ಳುತ್ತದೆ.

ಈ ಬಗೆಯ ಪ್ರಕೃತಿಯೊಂದಿಗೆ ಒಡನಾಟವನ್ನು ಹೊಂದಿದ್ದ ಬೇಂದ್ರೆ ಅವರು ಕಟ್ಟಿಕೊಟ್ಟ ವಾಸ್ತವ ಇಂದು ಪಡೆದುಕೊಂಡ ರೂಪವನ್ನು ಓದುಗರೊಂದಿಗೆ ಮೂಖಾಮುಖಿಗೊಳಿಸುವ ಪ್ರಯತ್ನವಾಗಿ ಈ ಲೇಖನ ಬರೆದಿದ್ದೇನೆ. 'ಜೋಗಿ' ಕವಿತೆಯಲ್ಲಿ ಬಳಸಿರುವ ಭಾಷೆ ಗ್ರಾಮೀಣ ಸೋಗಡಿನಿಂದ ಕೂಡಿರುವಂತದ್ದು. ಆಡು ಮಾತಿನ ಶೈಲಿಯಲ್ಲಿ ರಚಿಸಿರುವುದರಿಂದ ಕವಿತೆಯ ಪ್ರತಿಯೊಂದು ಸಾಲು ನಾವು ಕಳೆದು ಕೊಂಡ ಸೌಂದರ್ಯದ ಪ್ರತಿನಿಧಿಯಂತೆ ಅನಿಸುತ್ತಿದೆ.

> "ಮರವು ಮುಗಿಲಿಗೆ ನೀಡಿದೆ ಗಿಡದ ಪೊದೆರೊಳು ಹಾಡಿದೆ
> ಗಾಳಿ ಎಲ್ಲೂ ಆಡಿದೆ ದುಗುಡ ಇಲ್ಲಿಂದೊಡಿದೆ
> ಹೇಳು ಗೆಳೆಯ ಬೇರೆ ಎಲ್ಲೀ ತರದ ನೋಟ ನೋಡಿದೆ"

ಎಂಬ ಕವಿತೆ ಧಾರವಾಡ ಪರಿಸರದ ಚಿತ್ರಣವನ್ನು ನೀಡುತ್ತಿದೆ. ಅಲ್ಲಿಯ ಪರಿಸರದ ಸೌಂದರ್ಯವನ್ನು ಕಾಣದ ಅದೆಷ್ಟೊ ಸಹೃದಯ

ಜೀವಿಗಳಿಗೆ ‘ಜೋಗಿ’ ಕವಿತೆ ಮೂರ್ತ ಭಾವನೆಗಳು ಹುಟ್ಟಲು ಕಾರಣವಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು. “ನಂದನದ ಸೋಬಗೊಂದು ಬಿದ್ದಿದೆ ನೋಟ ಸೇರದು ಯಾರಿಗೆ”[೫] ಎಂಬ ಮಾತು ಅರ್ಥಗರ್ಭಿತವಾಗಿದೆ. ೧೯ನೇಯ ದಶಕದಲ್ಲಿ ಅದೊಂದು ನಂದನ ವನದಂತೆ ಶೋಭಿಸಿತ್ತು.

ಬೇಂದ್ರೆ ಪ್ರಕೃತಿಯ ಮೇಲೆ ಬರೆದ ಎಲ್ಲ ಕವಿತೆಗಳನ್ನು ಸಮಕಾಲಿನತೆಯೊಂದಿಗೆ ಮೂಖಾಮುಖಿಗೊಳಿಸಿ ಅಧ್ಯಯನ ಮಾಡುವ ಅಗತ್ಯತೆ ಇಂದು ನಮ್ಮ ಮುಂದಿದೆ. ತನ್ನ ಸೊಬಗಿನಿಂದಲೇ ಆಕರ್ಷಣಿಯ ಕೇಂದ್ರವಾಗಿದ್ದ ಸಾಧನಕೇರಿಯ ಪರಿಸರದ ಚಿತ್ರಣ ಬದಲಾದ ಕುರಿತು ಹೊಸ ಬೆಳಕು ಮೂಡುವ ಪ್ರಯತ್ನವನ್ನು ನಾವಿಂದು ಮಾಡಬೇಕಾಗಿದೆ. ಇಲ್ಲಿ ವಿವರವಾಗಿ ಹೇಳಿರುವ ಸಂಗತಿಗಳು ವಾಸ್ತವ ನೋಟದ ಹಿನ್ನಲೆಯಲ್ಲಿ ಬರೆದಿರುವಂತವು.

**ಆಧಾರ ಗ್ರಂಥಗಳು**

1. ಅಂಬಿಕಾತನಯದತ್ತ ಸಮಗ್ರ ಕಾವ್ಯ, ಸಂಪುಟ ೨, ವಾಮನ ಬೇಂದ್ರೆ, ಡಾ. ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆ ಹುಬ್ಬಳ್ಳಿ.
2. ಮತ್ತೆ ಮತ್ತೆ ಬೇಂದ್ರೆ, ಕಿ ರಂ ನಾಗರಾಜ, ಅಹರ್ಶಿನಿ ಪ್ರಕಾಶನ ಶಿವಮೊಗ್ಗ, ೨೦೧೨.
3. ಅಂಬಿಕಾತನಯದತ್ತ ಸಮಗ್ರ ಕಾವ್ಯ, ಸಂಪುಟ ವಾಮನ ಬೇಂದ್ರೆ
4. ಸಮಕಾಲಿನ ಸಾಹಿತ್ಯ ವಿಮರ್ಷೆ, ಜಿ ಹೆಚ್ ನಾಯಕ್, ಅಕ್ಷರ ಪ್ರಕಾಶನ ಸಾಗರ್, ೧೯೭೩.
5. ಅಂಬಿಕಾತನಯದತ್ತ ಸಮಗ್ರ ಕಾವ್ಯ, ಸಂಪುಟ ೨, ವಾಮನ ಬೇಂದ್ರೆ, ಡಾ. ದ. ರಾ.ಬೇಂದ್ರೆ ಸಂಶೋಧನಾ ಸಂಸ್ಥೆ ಹುಬ್ಬಳ್ಳಿ.
6. ಬೇಂದ್ರೆ ಕಾವ್ಯ ಲೋಲಕ– ವಾಮನ ಬೇಂದ್ರೆ, ಬೇಂದ್ರೆ ಟ್ರಸ್ಟ ಸಾಧನಕೇರಿ, ಧಾರವಾಡ.